MR. DEPUTY SPEAKER.—The question is :

"That in sub-clause 2 of Clause 1 the following shall be substituted, *viz.*,

"(2) (a) This section and all other sections of this Act, except section 5, shall come into force in the whole of the State on the first day of May 1975.

(b) Section 5 shall come into force in the City of Bangalore, the City of Hubli-Dharwar and the City Municipalities of Mysore, Mangalore, Belgaum, Gulbarga, Bellary, Davanagere, Bijapur, Shimoga and Bhadravathi on the said date and in the other areas of the State on such date as the State Government may by notification, specify and different dates may be specified for different areas"

The amendment was adopted

MR. DEPUTY SPEAKER.—The question is :
That Clause I as amended do stand part of the Bill.

The motion was adopted

Clause I as amended was added of the Bill.

MR. DEPUTY SPEAKER.—I shall put clause I as amended, the preamble and the title to the vote of the House.

The question is :

"That clause I, as amended, the Long Title, the Preamble and the Enacting formula do stand part of the Bill."

The motion was adopted

Clause I as amended, the Long Title, the Preamble, and the Enacting formula were added to the Bill.

MOTION TO PASS

SRI N. HUTCHAMASTHI GOWDA.—Sir, I beg to move :

"That the Karnataka Stamp Amendment Bill, 1975, as amended be passed.'"

MR. DEPUTY SPEAKER.—The question is :

"That the Karnataka Stamp amendment Bill, 1975, as amended be passed."

The motion was adopted and the Bill as amended was passed

Registration (Karnataka Amendment) Bill, 1975

Motion to consider

SRI N. HUTCHAMASTHY GOWDA.—Sir, I beg to move :

That the Registration (Karnataka Amendment)Bill, 1975 be taken into consideration.

MR. DEPUTY SPEAKER.—Motion moved :

"That the Registration (Karnataka Amendment) Bill, 1975 be taken into consideration."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಸರಕಾರ ಈಗ ಸ್ಟಾಂಪ್ ಆಕ್ಟನ್ನು ತಿದ್ದುಪಡಿ ಮಾಡಿದಮೇಲೆ ಇಂತಹ ಒಂದು ತಿದ್ದುಪಡಿ ಮಾಡೂದೆ ತರುವುದು ಅಗತ್ಯವಾಗಿದೆ. ಇವೆರಡನ್ನೂ ಒಪ್ಪಿಕೊಂಡು ಆ ನಂತರ ಕೇಂದ್ರ ಸರಕಾರಕ್ಕೆ ಅವರ ಒಪ್ಪಿಗೆಗಾಗಿ ಇದನ್ನು ಕಳುಹಿಸಲಾಗಿದೆ. ಇದು ಸ್ಟಾಂಪ್ ಆಕ್ಟ್ ಅಮೆಂಡ್‌ಮೆಂಟಿಗೆ ಅನುಗುಣವಾಗಿದೆ ಮತ್ತು ಇದರಲ್ಲಿ ರಿಜಿಸ್ಟ್ರೇಷನ್ ಫೀ ಯಾವ ರೀತಿ ಇರಬೇಕೆಂದು ಇದರಲ್ಲಿ ಹೇಳಲಾಗಿದೆ. ಇದರ ಉದ್ದೇಶ ಇಷ್ಟೇ. ಆದ್ದರಿಂದ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

5-00 P.M.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈಗತಾನೆ ಪಾಸ್ ಆದಂಥ ಬಿಲ್‌ಗೆ ಸಂಬಂಧ ಪಟ್ಟಂತೆ ಇದನ್ನು ತಂದಿದ್ದಾರೆ. ಈ ಹಿಂದೆ ನಾನು ಮಾತನಾಡುವಾಗ ಏನೇನು ವಿವರಗಳನ್ನು ಕೊಟ್ಟೆನೋ ಅದೆಲ್ಲವೂ ಸಹ ಈ ಬಿಲ್‌ಗೂ ಅನ್ವಯವಾಗುತ್ತದೆ. ಸ್ಟಾಂಪ್ ವ್ಯಾಲ್ಯೂ ಜಾಸ್ತಿಯಾದಂತೆ ರಿಜಿಸ್ಟ್ರೇಷನ್ ಚಾರ್ಜ್ ಸಹ ಜಾಸ್ತಿಯಾಗುತ್ತದೆ. ಅದಕ್ಕಾಗಿ ಈ ಬಿಲ್ಲನ್ನು ತಂದಿದ್ದಾರೆ ಈ ಮೊದಲು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಮಾತ್ರ ಲಂಚವಿದೆ ಎಂಬ ಪ್ರತೀತಿ ಇತ್ತು. ಅದೇ ಲಂಚಕ್ಕೆ ಮೂಲ ಎಂದು ಜನರು ಹೇಳುತ್ತಿದ್ದರು. ಆದರೆ ಇಂದು ಸರ್ಕಾರದವರೂ ನಡೆಸುತ್ತಿರುವ ಎಲ್ಲ ಇಲಾಖೆಗಳಲ್ಲಿಯೂ ಸಹ ಈ ಲಂಚದ ಹಾವಳಿ ಹೆಚ್ಚಾಗಿದೆ ಈಗ ಸರ್ಕಾರದವರು ಏನು ಒಂದು ತಿದ್ದುಪಡಿ ತಂದಿದ್ದಾರೆ, ಅದು ಯಶಸ್ವಿಯಾಗಬೇಕಾದರೆ ಈಗಿನ ಆಡಳಿತವನ್ನು ಮೊದಲು ಸರಿಪಡಿಸಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಇದರಿಂದ ಯಾವ ಅನುಕೂಲವೂ ಆಗುವುದಿಲ್ಲವೆಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಸೇಲ್ಸ್ ಟ್ಯಾಕ್ಸ್ ಆಫೀಸರ್ ಆಗಿ ಕೆಲಸ ಮಾಡಲು ಮತ್ತು ಸಬ್-ರಿಜಿಸ್ಟ್ರಾರ್ ಆಗಿ ಕೆಲಸ ಮಾಡಲು ಕೆಲವರು ಮಂತ್ರಿಗಳ ಮೇಲೆ ತಮ್ಮ ಪ್ರಭಾವ ಬೀರುತ್ತಾರೆ. ಇದಕ್ಕೆ ಕಾರಣ ಬೆಂಗಳೂರು ನಗರದಲ್ಲಿ ಸಂಬಳಕ್ಕಿಂತ ಗಿಂಬಳ ಜಾಸ್ತಿ ಸಿಗುತ್ತಿರುವುದು. ಇದೇ ಕಾರಣದಿಂದ ಬಹಳ ಜನರು ಬೆಂಗಳೂರು ನಗರದಲ್ಲಿ ಕೆಲಸ ಮಾಡಲು ಇಷ್ಟಪಟ್ಟು ಇಲ್ಲಿಯೇ ಹಾಕಿಸಿಕೊಳ್ಳಲು ಪ್ರಯತ್ನ ಪಡುತ್ತಾರೆ. ಇಂದು ಬೆಂಗಳೂರು ನಗರದಲ್ಲಿ ೬-೭ ಸಬ್‌ರಿಜಿಸ್ಟ್ರಾರ್ ಕಛೇರಿಗಳಿವೆ. ಹೆಚ್ಚಿನ ಪ್ರಭಾವ ಬೀರಬಲ್ಲ ಅಧಿಕಾರಿಗಳು ಯಾರು ಇರುತ್ತಾರೆ.' ಅವರುಗಳು ಬೆಂಗಳೂರು ನಗರದಲ್ಲಿಯೇ ಇರುತ್ತಾರೆ. ಅವರನ್ನು ವರ್ಗ ಮಾಡುವ ಸಂದರ್ಭ ಬಂದಾಗಲೂ ಸಹ ಬೆಂಗಳೂರು ನಗರದ ಒಂದು ಸರ್ಕಲ್‌ನಿಂದ ಇನ್ನೊಂದು ಸರ್ಕಲ್‌ಗೆ ವರ್ಗ ಮಾಡಿಸಿಕೊಳ್ಳುತ್ತಾರೆಯೇ ಹೊರತು ಬೇರೆ ಸ್ಥಳಗಳಿಗೆ ಹೋಗುವುದಿಲ್ಲ. ಎಲ್ಲಿ ಹೆಚ್ಚಿನ ಪತ್ರಗಳು ದಿನವೂ ರಿಜಿಸ್ಟರ್ ಆಗುತ್ತದೋ ಅಂತಹ ಕಡೆ ಇರಲು ಅವರು ಇಷ್ಟಪಡುತ್ತಾರೆ.' ಇಂತಹ ಕಡೆಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವಾಗ ಕೈ ಶುದ್ಧವಾಗಿರುವವರನ್ನು ನೇಮಕ ಮಾಡಬೇಕೆಂದು ನಾನು ಹೇಳುತ್ತೇನೆ. ಇಂದು ಪತ್ರ ರಿಜಿಸ್ಟರ್ ಮಾಡಿಸಲು ಹೋದಾಗ ಅದರಲ್ಲಿ ಸರಿಯಾಗಿ ಬರೆದಿದ್ದರೂ ಸಹ, ಹಿಂದಿನ ರೆಕಾರ್ಡ್‌ಗಳು ಸರಿಯಾಗಿದ್ದರೂ ಸಹ ಇಲ್ಲದ ತಕರಾರುಗಳನ್ನು ಹಾಕಿ ಹಣ ವಸೂಲಿ ಮಾಡಿ ಅದನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಅಲ್ಲಿ ಹೆಬ್ಬೆಟ್ಟು ಒತ್ತಿಸುವ ಜವಾನನಿಗೂ ಸಹ ಅದರಲ್ಲಿ ಪಾಲಿರುತ್ತದೆ. ಇದನ್ನು ಮೊದಲು ಹೋಗಲಾಡಿಸಬೇಕು. ಮೊದಲು ಸಬ್ ರಿಜಿಸ್ಟ್ರಾರ್ ಕಚೇರಿಗಳನ್ನು ಕ್ರಮಬದ್ಧಪಡಿಸಬೇಕು. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಅಲ್ಲಿಯ ಅಧಿಕಾರಿಗಳು ಕ್ರಮಬದ್ಧವಾಗಿ ಮತ್ತು ಒಂದು ಶಿಸ್ತಿನಿಂದ ನಡೆದುಕೊಳ್ಳುವಂತೆ ತಿಳಿಸಬೇಕು. ಅಲ್ಲಿಯ ವ್ಯವಹಾರಗಳು ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ. ಅದು ಗೊತ್ತಿದ್ದರೂ ಸಹ ಅವರು ನಿಸ್ಸಹಾಯಕರಾಗಿದ್ದಾರೆ. ಇನ್ನು ಮುಂದೆಯಾದರೂ ಸಹ ಯಾರು ನೂರು ಪರ್ಸೆಂಟ್ ಪ್ರಮಾಣಿಕವಾಗಿ ಕೆಲಸ ಮಾಡುತ್ತಾರೋ, ಅಂತಹ ಅಧಿಕಾರಿಗಳನ್ನೇ ಅಲ್ಲಿಗೆ ನೇಮಕ ಮಾಡಿ ಒಂದು ಶಿಸ್ತು ಮತ್ತು ನಿಯಮದಿಂದ ಕೆಲಸವಾಗುವಂತೆ ನೋಡಿಕೊಳ್ಳಬೇಕು. ಖಿದೀಮ ಕುಳಗಳು ಯಾರು ಇರುತ್ತಾರೋ ಅಂತಹವರನ್ನು ಅಲ್ಲಿಗೆ ಹಾಕಬಾರದು. ಯೋಗ್ಯರಾದವರನ್ನು ನೇಮಕ ಮಾಡಿದರೆ ಸರ್ಕಾರಕ್ಕೆ ಇನ್ನೂ ಹೆಚ್ಚಿನ ವರಮಾನ ಬರುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಸ್ಟಾಂಪ್ ಆಕ್ಟ್ ಬಿಲ್ ಬಗ್ಗೆ ನಾನು ಏನು ಹೇಳಿದೆನೋ ಅದೇ ವಿಷಯಗಳು ಇದಕ್ಕೂ ಅನ್ವಯವಾಗುವುದರಿಂದ. ಇದರ ಬಗ್ಗೆ ಇನ್ನು ಹೆಚ್ಚು ಹೇಳಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್). — ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರಿಜಿಸ್ಟ್ರೇಷನ್ ಆಕ್ಟ್‌ಗೆ ಏನು ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ ಅದರ ಬಗ್ಗೆ ಮಾನ್ಯ ಶಾಮಣ್ಣನವರು ಈಗಾಗಲೇ ಮಾತನಾಡಿ ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ಯಾವ ತರಹ ಅವ್ಯವಹಾರಗಳು ನಡೆಯುತ್ತಿದೆ ಎಂಬುದನ್ನು ಹೇಳಿದ್ದಾರೆ. ಆ ಬಗ್ಗೆ ಇನ್ನೂ ಸ್ವಲ್ಪ ವಿಷದಪಡಿಸಬೇಕೆಂದಿದ್ದೇನೆ. ಈ ಬಿಲ್ಲನ್ನು ಪಾಸ್ ಮಾಡುವುದರಿಂದ ಸರ್ಕಾರಕ್ಕೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆ. ಇದೇ ಸಂದರ್ಭದಲ್ಲಿ ನಮ್ಮ ರಾಜ್ಯದ ಈಗಿನ ಆರ್ಥಿಕತೆಯನ್ನು ಸ್ವಲ್ಪ ಉತ್ತಮಪಡಿಸಬೇಕಾದ ಜವಾಬ್ದಾರಿ ಸಹ ಸರ್ಕಾರದ ಮೇಲಿದೆ ಆದರೆ ಆ ಕೆಲಸವನ್ನು ಸರ್ಕಾರದವರು ಮಾಡುವುದಕ್ಕೆ ಇನ್ನೂ ಮನಸ್ಸು ಮಾಡಿಲ್ಲ. ಇಂದು ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ಏನು ವ್ಯವಹಾರ ನಡೆಯುತ್ತಿದೆ ಎಂಬುದು ಸನಗಿಂತ ಮಾನ್ಯ ಮಂತ್ರಿಗಳಿಗೇ ಹೆಚ್ಚು ಗೊತ್ತಿದೆ. ಒಂದು ಸಲ ಅವರು ಅಲ್ಲಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಲ್ಲಿಯ ಅಧಿಕಾರಿಗಳ ಜೋಬಿನಲ್ಲಿದ್ದ ಪೈಸೆಗಳನ್ನು ಸಹ ಹೊರಕ್ಕೆ ತೆಗೆಸಿ ಎಲ್ಲರನ್ನೂ ಲೆಕ್ಕ ಪಾಕಿಸಿ ಮುಂದಿನ ಕ್ರಮ ಕೈಗೊಂಡರು. ನನಗೆ ಬಂದಿರುವ ವ್ಯಥೆ ಏನೆಂದರೆ, ಅಲ್ಲಿಯ ಅವ್ಯವಹಾರಗಳು ಸರ್ಕಾರಕ್ಕೆ ಗೊತ್ತಿದ್ದರೂ ಸಹ ಮತ್ತು ಅದರಿಂದ ಬಡ ಜನರಿಗೆ ಆಗುತ್ತಿರುವ ಕಿರುಕುಳ ಗೊತ್ತಿದ್ದರೂ ಸಹ ಕಾನೂನಿನ ಚೌಕಟ್ಟಿನಲ್ಲಿ ಅದನ್ನು ಸರಿಪಡಿಸುವುದಕ್ಕೆ ಏತಕ್ಕೆ ಕ್ರಮ ಕೈಗೊಂಡಿಲ್ಲ ? ಇದೇ ಸಂದರ್ಭದಲ್ಲಿ ಆ ಬಗ್ಗೆ ಸಹ ಕಾನೂನಿನ ಬದಲಾವಣೆ ಮಾಡುವು. ದಕ್ಕೆ ಅವಕಾಶವಿದ್ದರೂ ಸಹ, ಅದರ ಬಗ್ಗೆ ಗಮನ ಕೊಡದಿರುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಇದೇ ಸಂದರ್ಭದಲ್ಲಿ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬಹುದಾಗಿತ್ತು. ಆದರೆ ಅದರ ಕಡೆಗೆ ಸರ್ಕಾರದವರು ಗಮನ ಕೊಟ್ಟು ಕೆಲಸ ಮಾಡುತ್ತಿಲ್ಲ. ಈಗ ಕೆಲವು ಕಲಂಗಳನ್ನು ಮೊತ್ರ ಬದಲಾವಣೆ ಮಾಡುತ್ತಿದ್ದಾರೆ. ಎಲ್ಲ ಜನರಿಗೂ ಅನುಕೂಲವಾಗುವಂತೆ ಕಾನೂನನ್ನು ಬದಲಾವಣೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಅಭಿಪ್ರಾಯ. ಇದು ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ನಡೆಯುತ್ತಿರುವುದಾದರೂ ಸಹ ಏನು ? ಒಂದು ಪತ್ರ ರಿಜಿಸ್ಟರ್ ಆದರೆ, ಅದನ್ನು ವಾಪಸ್ ಕೊಡಲು ೩ ತಿಂಗಳ ಸಮಯ ಬೇಕೆಂದು ಹೇಳುತ್ತಾರೆ. ಇದರಿಂದ ಬಾವಿ ತೆಗೆಸಲು ಸಾಲ ಪಡೆಯುವ ವರಿಗೆ ಬಹಳ ತೊಂದರೆಯಾಗುತ್ತಿದೆ. ರಿಜಿಸ್ಟರ್ ಆದ ಪತ್ರ ಇಲ್ಲದಿದ್ದರೆ ಬ್ಯಾಂಕಿನವರು ಸಾಲ ಕೊಡುವು ದಿಲ್ಲ ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದರ ಜೊತೆಗೆ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳಿಗೂ ಸಹ ಅಡ್ಡಿಯಾಗುತ್ತಿದೆ ಎಂದು ಹೇಳಬಹುದು. ಆದಕಾರಣ ೩ ತಿಂಗಳ ವಾಯಿದೆಯನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಎನ್‌ಕಮ್‌ಬರೆನ್ಸ್ ಸರ್ಟಿಫಿಕೇಟನು ಸಹ ಬ್ಯಾಂಕಿನವರು ಸಾಲ ತೆಗೆದುಕೊಳ್ಳುವ ಸಮಯದಲ್ಲಿ ಕೇಳುತ್ತಾರೆ. ೧೨ ವರ್ಷದ್ದು ಬೇಕು ಎಂದು ಕೇಳುತ್ತಾರೆ. ಆದನ್ನು ತೆಗೆದುಕೊಳ್ಳುವುದಕ್ಕೆ ಸಬ್-ರಿಜಿಸ್ಟ್ರಾರ್ ಕಚೇರಿಗೆ ಹೋದರೆ, ೧೫ ದಿವಸ ಬಿಟ್ಟು ಬನ್ನಿ, ಒಂದು ತಿಂಗಳು ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಇದರಿಂದ ರೈತರಿಗೆ ಕೂಡಲೇ ಸಾಲ ತೆಗೆದುಕೊಳ್ಳಲು ಅವಕಾಶವಾಗುತ್ತಿಲ್ಲ. ಏನಾದರೂ ಆ ಕಚೇರಿಯ ಅಧಿಕಾರಿಗಳ ಕೈಯನ್ನು ಹೆಚ್ಚಿಗೆ ಮಾಡಿದರೆ ಆ ಸರ್ಟಿಫಿಕೇಟನ್ನು ತಕ್ಷಣವೆ ಕೊಡುತ್ತಾರೆ. ಇಂತಹ ನಿದರ್ಶನಗಳು ಬೇಕಾದಷ್ಟು ಇವೆ. ಕೆಲವು ಸಂದರ್ಭಗಳಲ್ಲಿ ಅವರು ಕೊಡುವಂತಹ ಎನ್‌ಕಮ್‌ಬರೆನ್ಸ್ ಸರ್ಟಿಫಿಕೇಟ್‌ಗಳು ಸಹ ಸರಿಯಾಗಿರುವುದಿಲ್ಲ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಕೆಲಸ ಮಾಡಿದ ಅನುಭವದಿಂದ ನಾನು ಇದನ್ನು ಹೇಳುತ್ತಿದ್ದೇನೆ. ದಡ್ಡು ಯಾವ ರೀತಿ ಕೊಡುತ್ತಾರೋ ಆ ರೀತಿ ಸರ್ಟಿಫಿಕೇಟ್ ಕೊಡುತ್ತಾರೆ, ಕಳೆದ ೧೨ ವರ್ಷಗಳಲ್ಲಿ ನಡೆದಿರುವ ಎಲ್ಲ ವ್ಯವಹಾರ ಗಳನ್ನು ಆ ಸರ್ಟಿಫಿಕೇಟ್‌ನಲ್ಲಿ ನಮೂದು ಮಾಡಬೇಕೆಂದು ನಿಯಮವಿದ್ದರೂ ಸಹ, 'ನಿಲ್' ಎಂದು ಸರ್ಟಿಫಿಕೇಟ್ ಕೊಟ್ಟಿರುವ ಅನೇಕ ನಿದರ್ಶನಗಳಿವೆ. ಈ ರೀತಿಯಾಗದಂತೆ ನೋಡಿಕೊಳ್ಳಬೇಕು. ಈ ಬಿಲ್ಲನ್ನು ಪಾಸ್ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುವ ಕಾರಣ, ಆ ಹಣವನ್ನು ಕೊಡತಕ್ಕಂಥ ಜನರಿಗೆ ಸಹ ಎಲ್ಲ ರೀತಿಯ ಅನುಕೂಲಗಳನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಅದು ಸರ್ಕಾರದ ಕರ್ತವ್ಯವಾಗಿದೆ. ಆದರೆ ಆ ಬಗ್ಗೆ ಇಂದು ಸರ್ಕಾರದವರು ಯಾವ ತಿದ್ದುಪಡಿಗಳನ್ನೂ ಸಹ ತಂದಿಲ್ಲ.

ಇದರಲ್ಲಿ ಎಗ್ಸಿಕ್ಯುಟೀವ್ ಪವರ್ಸ್ ಇದೆ ಎಂದು ನಾನು ಭಾವಿಸಿದ್ದೇನೆ. ಅದನ್ನಾದರೂ ಉಪಯೋಗಿಸಿ ಇದರಲ್ಲಿರತಕ್ಕ ದುರ್ವ್ಯವಹಾರಗಳನ್ನು ಸರಿಪಡಿಸಿ ಅದರಲ್ಲೂ ಕೂಡ ಬ್ಯಾಂಕುಗಳ ಮೂಲಕ ಹಣವನ್ನು ಪಡೆಯತಕ್ಕ ರೈತರಿಗೆ ಸಾಲವನ್ನು ಪಡೆಯತಕ್ಕ ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಸರ್ಕಾರ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಸೂಚನೆ ಕೊಟ್ಟು ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಶಾಮಣ್ಣನವರು ಹಿಂದೆ ಈಗಾಗಲೇ ಈ ಸಭೆಯ ಒಪ್ಪಿಗೆ ಪಡೆದಂತಹ ಮಸೂದಾ ಕಾನೂನಿನ ಬಗ್ಗೆ ಏನು ಸಲಹೆಗಳನ್ನು ಕೊಟ್ಟಿದ್ದಾರೆಯೋ ಅದೇ ಸಲಹೆಗಳನ್ನು ಈಗಲೂ ಹೇಳಿದ್ದಾರೆ. ಆದ್ದರಿಂದ ಆ ಮಸೂದೆಯ

ಚರ್ಚೆಗೆ ಹಿಂದೆ ಅವರ ಸಲಹೆಗಳಿಗೆ ಏನು ಉತ್ತರ ಹೇಳಿದ್ದೇನೋ ಅದೇ ಉತ್ತರ ಈಗ ಕೊಟ್ಟಿರತಕ್ಕ ಸಲಹೆಗಳಿಗೂ ಅನ್ವಯಿಸುತ್ತದೆ. ಅವರು ಮುಖ್ಯವಾಗಿ ಏನು ಹೇಳಿದರು ಎಂದರೆ ಬೆಂಗಳೂರು ನಗರದಲ್ಲಿ ಹೆಚ್ಚಿಗೆ ವ್ಯವಹಾರಗಳು ನಡೆಯುವ ಕಡೆ ಒಳ್ಳೆಯ ಪ್ರಾಮಾಣಿಕರನ್ನು ನೋಡಿ ಆರಿಸಿ ಹಾಕಬೇಕು ಎಂದು ಹೇಳಿದರು. ಸಬ್ ರಿಜಿಸ್ಟ್ರಾರ್ ಅವರ ಕಛೇರಿಗಳನ್ನು ಒಂದು ಕಡೆಯಿಂದ ನಾನು ಅನೇಕ ಕಛೇರಿಗಳನ್ನು ನೋಡಿದ್ದೇನೆ. ಯಾವ ಕಛೇರಿಯಲ್ಲಿ ನೋಡಿದರೂ ಅಪರಾಧ ಇಲ್ಲದೆ ಇರತಕ್ಕವನು ಬಹಳ ಕಡಿಮೆ. ಆದ್ದರಿಂದ ಅಂಥಾ ಒಳ್ಳೆಯ ಪ್ರಾಮಾಣಿಕರನ್ನು ಹುಡುಕಿ ಹುಡುಕಿ ಹಾಕಬೇಕೆಂಬುದು ಕಷ್ಟವಾಗಿದೆ: ಇದನ್ನು ಯಾವ ರೀತಿ ಮಾಡಬೇಕೆಂದರೆ ಆಗಿಂದಾಗ್ಗೆ ಕಚೇರಿಗಳನ್ನು ತನಿಖೆ ಮಾಡಿ ತಪ್ಪಿತಸ್ಥರಿಗೆ ಸ್ವಲ್ಪ ಉಗ್ರ ಶಿಕ್ಷೆ ಕೊಟ್ಟರೆ ಮಾತ್ರ, ಈ ಅಪರಾಧಗಳು ಸ್ವಲ್ಪ ಕಡಿಮೆ ಆಗಬಹುದು ಎಂದು ನನ್ನ ಆಶೆ ಈ ಪ್ರಯತ್ನವನ್ನು ನಾನು ಒಬ್ಬ ಮಾಡಿದರೆ ಆಗುವುದಿಲ್ಲ. ಮೇಲ್ಪಟ್ಟ ಅಧಿಕಾರಿಗಳು ಹೆಚ್ಚು ಹೆಚ್ಚು ಕಚೇರಿಗಳನ್ನು ನೋಡಿ ಅಲ್ಲಿ ನೌಕರರು ಹಾಗೂ ಅಧಿಕಾರಿಗಳು ಮಾಡತಕ್ಕ ತಪ್ಪು ಗಳನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ಮಾಡತಕ್ಕ ಕೆಲಸವನ್ನು ಮಾಡಬೇಕು ಎಂದು ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಈ ಕೆಲಸವನ್ನು ಮಾಡುವುದರಿಂದ ಇದು ಸ್ವಲ್ಪ ಸುಧಾರಣೆ ಆಗಬಹುದು ಎಂಬ ವಿಶ್ವಾಸ ನನಗೆ ಇದೆ. ಶ್ರೀಮಾನ್ ಸಿ. ಬೈರೇಗೌಡರು ಒಂದು ಮಾತನ್ನು ಹೇಳಿದರು. ಯಾವುದಾದರೂ ಒಂದು ಪತ್ರದ ಕಾಪಿಯನ್ನು ಬೇಕೆಂದು ಸಬ್‌ರಿಜಿಸ್ಟ್ರಾರ್ ಅವರ ಆಫೀಸಿನಲ್ಲಿ ಕೇಳಿದರೆ ಅದನ್ನು ಕೊಡುವುದು ನಿಧಾನ ಮಾಡುತ್ತಿದ್ದಾರೆ ಎಂದು ಹೇಳಿದರು. ಮತ್ತು ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿದರು. ಆದ್ದರಿಂದ ಇದಕ್ಕೆ ನಾವು ಏನು ಆಲೋಚನೆ ಮಾಡಿದ್ದೇವೆ ಎಂದರೆ ಪತ್ರವನ್ನು ಬರೆದು ಕೊಡುವಾಗ ಅವನು ಒಂದು ಕಾಪಿ ಎಕ್ಸ್‌ಟ್ರಾ ತಯಾರು ಮಾಡಿ ಕೊಡುವುದರಿಂದ ಸ್ವಲ್ಪಮಟ್ಟಿಗೆ ನಿಧಾನ ಆಗುವುದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ಎಂದು ನಾವು ಆಲೋಚನೆ ಮಾಡಿದ್ದೇವೆ. ಫಿಲಂ ಅನ್ನು ತೆಗೆದ ಕೊಂಡು ಪ್ರಿಜರ್ವ್ ಮಾಡುವುದ ಕ್ಕಾಗಲೀ ಕಾಪಿಯನ್ನು ಬೇಗ ತಯಾರು ಮಾಡಿ ಕೊಡುವುದಕ್ಕಾಗಲೀ ಯಾವ ರೀತಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ವಿಷಯದಲ್ಲಿ ಅಧಿಕಾರಿಗಳನ್ನು ಮಹಾರಾಷ್ಟ್ರಕ್ಕೆ ಕಳುಹಿಸಿ ಅಲ್ಲಿಂದ ಅವರು ವಿಷಯಗಳನ್ನು ಸಂಗ್ರಹಿಸಿಕೊಂಡು ಬಂದಿದ್ದಾರೆ. ಈ ಬಗ್ಗೆ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ಜನಗಳಿಗೆ ಇರತಕ್ಕಂಥಾ ತೊಂದರೆಯನ್ನು ಪರಿಹಾರ ಮಾಡಬೇಕು ಎಂದು ಸರ್ಕಾರ ಆಲೋಚನೆ ಮಾಡಿದೆ. ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಕೊಡುವ ವಿಷಯದಲ್ಲಾಗಲೀ, ಪತ್ರವನ್ನು ರಿಜಿಸ್ಟ್ರೇಷನ್ ಮಾಡಿ ಕೊಡುವ ವಿಷಯದಲ್ಲಾಗಲೀ ಮ್ಯುಟೇಷನ್ ಸ್ಲಿಪ್ ಖಾತೆ ಬದಲಾವಣೆ ಮಾಡುವ ವಿಷಯವಾಗಲೀ ಇವುಗಳೆಲ್ಲವನ್ನೂ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಭರವಸೆ ಕೊಟ್ಟು ಈ ಮಸೂದೆಗೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು.—ಸ್ವಾಮಿ ನಮ್ಮ ದೇಶದಲ್ಲಿ ಸ್ಟ್ಯಾಂಪ್ ಪೇಪರ್ ಸಿಕ್ಕುವುದು ಬಹಳ ಕಷ್ಟವಾಗಿದೆ. ೪ ಆಣೆ ಸ್ಟ್ಯಾಂಪ್ ಪೇಪರ್ ಬೇಕು ಎಂದರೆ ಒಂದು ರೂಪಾಯಿನದು ಇದೆಯೆಂದು ಹೇಳುತ್ತಾರೆ. ಒಂದು ರೂಪಾಯಿ ಸ್ಟ್ಯಾಂಪ್ ಪೇಪರ್ ಬೇಕು ಎಂದು ಹೇಳಿದರು ೫ ರೂಪಾಯಿಗಳು ಇದೆಯೆಂದು ಹೇಳುತ್ತಾರೆ ಕೋಲಾರ ಜಿಲ್ಲೆಯಲ್ಲಿ ಚಾಪಾಕಾಗದಗಳು ಸಿಕ್ಕುವುದೇ ಇಲ್ಲ ಅಲ್ಲಿ ಜಲನ್ ಕಟ್ಟಿ ಖಾಲಿ ಕಾಗದದ ಮೇಲೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳಬೇಕಾಗಿದೆ. ಇದರಿಂದಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಸ್ಟ್ಯಾಂಪ್ ಕಾಗದದ ಅಭಾವ ಬಹಳ ಜಾಸ್ತಿಯಾಗಿದೆ. ಈ ರೀತಿ ಅಭಾವ ಬಂದಿರುವುದು ನಮ್ಮ ದೇಶಕ್ಕೆ ಅಭಾವ ಬಂದಿದೆಯೇ ಅಥವಾ ನಮ್ಮ ಕೋಲಾರ ಜಿಲ್ಲೆಗೆ ಮಾತ್ರ ಬಂದಿದೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು.

MR. DEPUTY SPEAKER.—The question is :

That the Registration [Karnataka Amendment] Bill 1975 be taken into consideration.

The motion was adopted

Clause 2

ಉಪಾಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಮಾನ್ ಕಾಮಣ್ಣನವರು ತಮ್ಮ ತಿದ್ದುಪಡಿಯನ್ನು ಮಂಡಿಸಬಹುದು.

SRI T. R. SHAMANNA.—Sir, I beg to move.

"That after sub-clause (1), for the words 'communicated to him' the following words shall be added, namely —

"Penality upto fifty percent of the real registration fee payable by the concerned person."

MR. DEPUTY SPEAKER —Amendment moved.

"That after sub-clause (1), for the words 'communicated to him" the following words shall be added, namely.—

"Penalty upto fifty percent of the real registration fee payable by the concerned person"

† ಶ್ರೀ ಟಿ ಆರ್. ಶಾಮಣ್ಣ.— ನಾನು ಈಗಾಗಲೇ ತಿಳಿಸಿದ ಹಾಗೆ ಯಾವುದಾದರೂ ಒಂದು ತಪ್ಪಿಗೆ ಶಿಕ್ಷೆ ಇರಲೇಬೇಕು ಎನ್ನೆತಕ್ಕಂಥಾದನ್ನ ಹೇಳಿದ್ದೇನೆ. ರಿಜಿಸ್ಟ್ರೇಷನ್ ಫೀಜು ಕಡಿಮೆ ಮಾಡಿದವರಿಗೆ ಅದಕ್ಕೆ ನ್ಯಾಯವಾಗಿ ಎಷ್ಟು ರಿಜಿಸ್ಟ್ರೇಷನ್ ಫೀಜು ಕೊಡಬೇಕೋ ಅದರ ಶೇಕಡಾಷ್ಟು ಪೆನಾಲ್ಟಿ ಹಾಕಬೇಕು. ಈ ದೃಷ್ಟಿಯಿಂದ ನಾನು ಈ ತಿದ್ದುಪಡಿಯನ್ನು ನಾನು ತಂದಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ —ಮೂಲ ಕಾನೂನಿನಲ್ಲಿ ಪೆನಾಲ್ಟಿಕ್ಲಾಜ್ ಇದೆ. ಆದ್ದರಿಂದ ಅದನ್ನು ಪ್ರತ್ಯೇಕವಾಗಿ ಹಾಕಬೇಕಾದಂಥಾದ್ದು ಇಲ್ಲ.

ಇನ್ನು ಮಾನ್ಯ ಸದಸ್ಯರಾದ ಶ್ರೀದೊರೆಸ್ವಾಮಿ ನಾಯ್ಡು ಅವರು ರಾಜ್ಯದಲ್ಲಿರತಕ್ಕ ಸ್ಟ್ಯಾಂಪ್‌ಪೇಪರ್ ಅಭಾವದ ಬಗ್ಗೆ ಹೇಳಿದ್ದಾರೆ. ಕಳೆದ ೯-೧೦ ತಿಂಗಳಲ್ಲಿ ೨೮ ಸಾರಿ ನಾವು ಸಂಬಂಧಪಟ್ಟವರಿಗೆ ಕಾಗದವನ್ನು ಬರೆದಿದ್ದೇವೆ. ಟೆಲಿಗ್ರಾಮ್ ಕಳಿಸಿದ್ದೇವೆ. ಸಾಕಷ್ಟು ಸ್ಟ್ಯಾಂಪ್ ಪೇಪರ್ ಕೊಡಬೇಕು ಎಂದೂ, ನಾವು ಪ್ರಯತ್ನ ಮಾಡಿದ್ದೇವೆ. ಆದರೂ ಕೂಡ ನಮಗೆ ಆಗುವಷ್ಟು ದೊರಕಿಲ್ಲ. ಅದಕ್ಕಾಗಿ ಜನಗಳಿಗೆ ತೊಂದರೆಯಾಗಬಾರದು ಸ್ಟ್ಯಾಂಪ್ ಎಷ್ಟು ಬೇಕೋ ಅಷ್ಟು ಹಣವನ್ನು ಟ್ರೆಜರಿಯಲ್ಲಿ ಡಿಪಾಜಿಟ್ ಮಾಡಿ ಚಲನ್ ಕೊಟ್ಟರೆ ಸಬ್ ರಿಜಿಸ್ಟ್ರಾರ್ ಖಾಲಿ ಕಾಗದದ ಮೇಲೆ ರಿಜಿಸ್ಟ್ರೇಷನ್ ಮಾಡಿ ಕೊಡಬೇಕು ಎಂದು ಅನುಕೂಲ ಮಾಡಿಕೊಟ್ಟಿದ್ದೇವೆ. ಅಷ್ಟೇ ಅಲ್ಲದೆ ಜನಗಳಿಗೆ ತೊಂದರೆಯಾಗದೇ ಇರುವ ಹಾಗೆ ಕಾಗದದಲ್ಲಿ ಎಂಬಾಸ್ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಜನಗಳಿಗೆ ತೊಂದರೆಯಾಗದೆ ಇರುವ ಹಾಗೆ ಮೊದಲು ಏನೇನು ಪ್ರಯತ್ನ ಮಾಡಬೇಕೋ ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ ಎಂದು ನಾನು ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯ್ಡು.— ಖಾಲಿ ಕಾಗದ ಮೇಲೆ ರಿಜಿಸ್ಟ್ರೇಷನ್ ಮಾಡಿಕೊಡುವುಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆ ಕಾಗದವನ್ನು ಮಡಿಸಿದರೆ ೩ ದಿವಸಗಳಲ್ಲಿ ಅದು ಹೊರಟು ಹೋಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಗಟ್ಟಿಯಾದ ಕಾಗದವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

MR DEPUTY SPEAKER.—The question is

"That after sub-clause 1, for the words 'communicated to him' the following words shall be added, namely.

"Penalty upto fifty percent of the real registration fee payable by the concerned person"

The amendment was negatived

MR. DEPUTY SPEAKER.—The question is.

"That clause 2 do stand part of the Bill"

The motion was adopted

Clause 2 was added to the Bill.

Clause 1 etc.

MR. DEPUTY SPEAKER.—The question is.

"That clause I, The long titly, the in exacting formulas preamble and do stand part of the Bill"

The motion was adopted

Clause I, the long title the preamble and Exchanging formulas were added to the Bill.

Motion to Pass

SRI N. HUTCHAMASTHY GOWDA.—Sir, I beg to move.

' That the Registration (Karnataka Amendment) Bill, 1975 be passed"

MR. DEPUTY SPEAKE.—The question is.

'That the Registration (Karnataka Amendment) Bill, 1975 be passed"

The motion was adopted and the Bill was passed

KARNATAKA SALES TAX (SECOND AMENDMENT) BILL, 1975. MOTION TO CONSIDER

MR. DEPUTY SPEAKER.— The Hon. Minister for Finance to move the consideration motion of the Karnataka sales Tax (Second Amendment) Bill, 1975.

SRI T. R. SHAMANNA.—I have given a notice of privilege against the hon. Finance Minister in respect of this.

MR. DEPUTY SPEAKER.— That will be considered at the appropriate time. That will be given due importance.

SRI T. R. SHAMANNA—it relates to this Bill alone. ಈಗಾಗಲೇ ಈ ಮಾನ್ಯ ಸಭೆ ಸೇಲ್ಸ್ ಟ್ಯಾಕ್ಸ್ ಮತ್ತು ಅದಕ್ಕೆ ಸಂಬಂಧಪಟ್ಟ ಕಾಯಿದೆಗಳ ಬಗ್ಗೆ ಚರ್ಚೆ ಮಾಡಿದೆ This House is a sovereign body which gives power to the Minister to meet the expenditure of the Department for six days, we debated on the demand and afterwards for two days about taxation. Though we expressed our dis-pleasure regarding the taxes levied, instead of giving reply here, the hon. Minister gave a reply in the other House.

MR. DEPUTY SPEAKER.—The hon. Minister for Finance may move the Motion first.

SRI M. Y. GHORPADE (Minister for Finance).—Sir, I beg to move

"That the Karnataka Sales Tax (Second Amendment) Bill 1975 be taken into consideration. '

MR. DEPUTY SPEAKER.—Motion moved.

"That the Karnataka sales Tax (Second Amendment) Bill 1975 be taken into consideration. "